**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.**

**SC.63/2025**

| | | |
|---|---|---|
| ಸಾಕ್ಷಿದಾರರ ಹೆಸರು | : | ಸಾಕಮ್ಮ |
| ಗಂಡನ ಹೆಸರು | : | ರೇವಣಸಿದ್ದಪ್ಪ |
| ವಯಸ್ಸು | : | 60 ವರ್ಷ |
| ಉದ್ಯೋಗ | : | ವ್ಯವಸಾಯ |
| ವಾಸ ಸ್ಥಳ | : | ಇಚ್ಚೇನಹಳ್ಳಿ, ಜಗಳೂರು ತಾಲ್ಲೂಕು |

ಪಿ.ಡಬ್ಲ್ಯೂ 3

ಸಿ.ಡಬ್ಲ್ಯೂ 4

ದಿ: 10-06-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ**

1. ನನಗೆ ಮೂರು ಜನ ಗಂಡು ಮಕ್ಕಳು. ಮೃತ ಬಸವರಾಜ ನನ್ನ ಮೂರನೇ ಮಗ. ಮೃತ ಬಸವರಾಜ 1 ನೇ ಆರೋಪಿಯನ್ನು ಪ್ರೀತಿಸಿ ಮದುವೆಯಾಗಿದ್ದ. ಆ 1 ನೇ ಆರೋಪಿ ಈ ದಿನ ನ್ಯಾಯಾಲಯದ ಮುಂದೆ ಇರುತ್ತಾರೆ. ಸದರಿಯವರಿಗೆ ಇಬ್ಬರು ಮಕ್ಕಳು. ನಮ್ಮ ಊರಿನಲ್ಲಿ 04 ವರ್ಷಗಳ ಕಾಲ ಮೃತ ಬಸವರಾಜ ಮತ್ತು 1 ನೇ ಆರೋಪಿ ಸಂಸಾರ ಮಾಡಿದರು. 04 ವರ್ಷಗಳ ನಂತರ 1 ನೇ ಆರೋಪಿಯು ಮೃತ ಬಸವರಾಜರವರ ಜೊತೆ ಸಂಸಾರ ನಡೆಸಲು ಇಷ್ಟ ಇಲ್ಲ ಡಿವೋರ್ಸ್ ಬೇಕು ಅಂತ ಕೇಳುತ್ತಿದ್ದರು. 1 ನೇ ಆರೋಪಿಗೆ ಸುನಿಲ್ / 2 ನೇ ಆರೋಪಿಯೊಂದಿಗೆ ಸಂಸಾರ ನಡೆಸಲು ಇಚ್ಛೆ ಇತ್ತು.

2. 1 ನೇ ಆರೋಪಿಯು 2 ನೇ ಆರೋಪಿಯೊಂದಿಗೆ ಮೈಸೂರಿಗೆ ಹೋಗಿದ್ದರು. 1 ನೇ ಆರೋಪಿಯನ್ನು ಮೃತ ಬಸವರಾಜರವರು ಎಲ್ಲಾ ಕಡೆ ಹುಡುಕಾಡಿದರೂ ಸಿಗಲಿಲ್ಲ. ನಂತರ ಪೊಲೀಸ್ ಠಾಣೆಗೆ ದೂರು ಕೊಟ್ಟರು. ನಂತರ ಪೊಲೀಸರು ಮೈಸೂರಿಗೆ ಹೋಗಿ 1 ನೇ ಆರೋಪಿಯನ್ನು ಕರೆದುಕೊಂಡು ಬಂದರು. ಆದರೂ ಸಹ 1 ನೇ ಆರೋಪಿಯು ಡಿವೋರ್ಸ ಬೇಕು ಅಂತ ಹೇಳಿದರು, ಎರಡು ಮಕ್ಕಳು ಇದ್ದಾರೆ ಜೀವನ ಮಾಡಿ ಅಂತ ಬುದ್ದಿವಾದ ಹೇಳಿದೆವು. ನಂತರ 1 ನೇ ಆರೋಪಿಯು ತನ್ನ ತವರ ಮನೆಯಾದ ಭಾತಿಗೆ ಹೋಗಿ ವಾಸವಿದ್ದರು. ಮೃತ ಬಸವರಾಜರವರು ತನ್ನ ಹೆಂಡತಿ ಮತ್ತು ಮಕ್ಕಳನ್ನು ನೋಡಲು ಹೋದಾಗ, ಅದಕ್ಕೆ 1 ನೇ ಆರೋಪಿಯು ಮೃತ ಬಸವರಾಜರವರಿಗೆ "ನೀನು ನನಗೆ ಬೇಕಿಲ್ಲ, ಡಿವೋರ್ಸ ಕೊಡು " ಅಂತ ಹೇಳಿದರು. ಆಗ ಮೃತ ಬಸವರಾಜರವರು ಮಕ್ಕಳಿಗೋಸ್ಕರ ಜೀವನ ಮಾಡಬೇಕು ಅಂತ ಹೇಳಿದರು. 1 ನೇ ಆರೋಪಿಯ ತಂದೆ ತಾಯಿಯವರು ಹೇಳಿದರೂ ಸಹ ಮತ್ತೆ 2 ನೇ ಆರೋಪಿಯೊಂದಿಗೆ ಹೋದರು. ನಂತರ 1 ನೇ ಆರೋಪಿಯು "ನಾನು ಬೇರೆ ಕಡೆ ಅಂದರೆ ಜಗಳೂರು ನಲ್ಲಿ ಮನೆ ಮಾಡಿದರೆ ಬರುತ್ತೇನೆ ನಿಮ್ಮ ಗ್ರಾಮಕಕ್ಷ್ ಬರುವುದಿಲ್ಲ " ಅಂತ ಹೇಳಿದರು. ಆದ್ದರಿಂದ ಮೃತ ಬಸವರಾಜರವರು ಜಗಳೂರಿನಲ್ಲಿ ಮನೆ ಮಾಡಿದರು. ಎರಡು ದಿನ ಮಾತ್ರ ಆ ಮನೆಯಲ್ಲಿ ಗಂಡ, ಹೆಂಡತಿ ಮತ್ತು ಮಕ್ಕಳು ಇದ್ದರು. ಮೃತ ಬಸವರಾಜರವರು ಟಾಟಾ ಎ.ಸಿ. ವಾಹನವನ್ನು ಚಾಲಯಿಸುತ್ತಿದ್ದರು. ಮೃತ ಬಸವರಾಜರವರು ಕೆಲಸದ ಮೇಲೆ ಹೋದಾಗ 1 ನೇ ಆರೋಪಿಯು 2 ನೇ ಆರೋಪಿಯ ಜೊತೆ ಹೋಗಿರುತ್ತಾರೆ. ಆಗ ಮಕ್ಕಳು ತುಂಬಾ ಅಳುತ್ತಿದ್ದರು. ಮನೆಯ ಮಾಲೀಕರು ಮಕ್ಕಳು ವಾಂತಿ ಮಾಡುತ್ತಿರುವುದನ್ನು ನೋಡಿ ಮೃತ ಬಸವರಾಜರವರಿಗೆ ಹೇಳಿದರು. ನಂತರ ಮೃತ ಬಸವರಾಜರವರು ಮಕ್ಕಳನ್ನು ಉಪಚರಿಸಿ ಕೆಚ್ಚೇನಹಳ್ಳಿಗೆ ಕರೆದುಕೊಂಡು ಬಂದರು. ನಾನು ಮಕ್ಕಳೊಂದಿಗೆ ಇಬ್ಬರು ಸಂಸಾರ ಮಾಡಿ ಅಂತ ಬುದ್ದಿವಾದ ಹೇಳಿದೆ. ಅದಕ್ಕೆ 1 ನೇ ಆರೋಪಿ ಮತ್ತು 2 ನೇ ಆರೋಪಿ ಪೋನ್ ಮಾಡಿ ಕಿರುಕುಳ ಕೊಡುತ್ತಿದ್ದರು. 2 ನೇ ಆರೋಪಿಯು

“ನೀನು ಸಾಯಿ ನೀನು ಸತ್ತರೆ 2 ನೇ ಆರೋಪಿಯೊಂದಿಗೆ ಚೆನ್ನಾಗಿ ಸಂಸಾರ ಮಾಡುತ್ತೇನೆ " ಅಂತ ಹೇಳುತ್ತಿದ್ದರು. ಆದ್ದರಿಂದ ಮೃತ ಬಸವರಾಜರವರು ನೇಣು ಹಾಕಿಕೊಂಡು ತೀರಿಕೊಂಡಿರುತ್ತಾರೆ. 1 ಮತ್ತು 2 ನೇ ಆರೋಪಿತರು ತಮ್ಮ ಸಂಬಂಧವನ್ನು ಮುಂದುವರೆಸಿದ್ದರಿಂದ, ಮೃತ ಬಸವರಾಜರವರು ನೇಣು ಹಾಕಿಕೊಂಡು ತೀರಿಕೊಂಡರು. ನನ್ನ ಮಗನ ಸಾವಿಗೆ 1 ಮತ್ತು 2 ನೇ ಆರೋಪಿತರು ಕಾರಣ ಆಗಿರುತ್ತಾರೆ.

**ಪಾಟೀ ಸವಾಲುಃ ಆರೋಪಿತರ ಪರವಾಗಿ**:

ಜೂನಿಯರ್ ವಕೀಲರು ಪಾಟೀ ಸವಾಲಿಗೆ ಸಮಯ ಕೋರಿದ್ದು, ಈಗಾಗಲೇ Trail fix ಆಗಿದ್ದರಿಂದ ಪಾಟೀ ಸವಾಲು ಏನೂ ಇಲ್ಲ ಅಂತ ತೆಗೆದುಕೊಳ್ಳಲಾಯಿತು.

**ಮರುವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓದಿ, ಹೇಳಿ, ಕೇಳಿ, ಸರಿ ಇದೆ.

Sd/-

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.